ಸಿವ್ಹಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ
ದಂಡಾಧಿಕಾರಿರವರ ನ್ಯಾಯಾಲಯ ಭಾಲ್ಕಿ

ಸಿ. ಸಿ. ಸಂಖ್ಯೆ: **246/2020**

ಚಾಸಾ-**12** ಫ್ರಾಸಾ-**3**

**ದಿನಾಂಕ: 17/09/2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಸಾಕ್ಷಿದಾರರ ಹೆಸರು : ಭೀಮಣ್ಣ

ತಂದೆ ಹೆಸರು : ಲಕ್ಷ್ಮಪ್ಪ

ವಯಸ್ಸು : 65 ವರ್ಷ

ಉದ್ಯೋಗ : ನಿವೃತ್ತ ಎ.ಎಸ್.ಐ

ವಾಸಸ್ಥಳ : ಭಾಲ್ಕಿ

**ಮುಖ್ಯ ವಿಚಾರಣೆ: ಸ. ಸ. ಅ. ರವರಿಂದ:**

ದಿ: 14/02/2011 ರಿಂದ 25/06/2017 ರವರೆಗೆ ಭಾಲ್ಕಿ ನಗರ ಪೋಲಿಸ ಠಾಣೆಯಲ್ಲಿ ಪೋಲಿಸ ಮುಖ್ಯ ಪೇದೆ ಎಂದು ಸೇವೆ ಸಲ್ಲಿಸಿದ್ದೇನೆ.

ದಿನಾಂಕ: 30/09/2015 ರಂದು ಮ:1-30 ಗ. ನಾನು ಠಾಣಾಧಿಕಾರಿಯಾಗಿ ಕೆಲಸ ಮಾಡುತಿದ್ದಾಗ ಚಾಸಾ-1 ರವರು ನೀಡಿದ ಗಣಕೀಕೃತ ವರದಿಯನ್ನು ಸ್ವಿಕರಿಸಿ ಠಾಣಾ ಗುನ್ನೆ ನಂ.367/2015 ರಡಿ ಪ್ರಕರಣ ದಾಖಲಿಸಿ, ಪ್ರ.ವ. ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಸದರಿ ವರದಿಯನ್ನು ನಿ.ಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-2(ಎ) ಎಂದು ಗುರುತಿಸಲಾಯಿತು.

ನಾನು ದಾಖಲಿಸಿದ ಪ್ರ.ವ.ವರದಿ ಇದೆ ಇದ್ದು ಅದನ್ನು ನಿ.ಪಿ.-03 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.03(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲು: ಆರೋಪಿ ಪರ ಶ್ರೀ. ಯು.ಡಿ.ಡಬ್ಲೂ. ವಕೀಲರಿಂದ:

ದೂರನ್ನು ಸ್ವಿಕರಿಸದೇ ಪ್ರ.ವ.ವ ದಾಖಲಿಸಿಕೊಂಡಿದ್ದೀರಾ ಎಂದರೆ ಸಾಕ್ಷಿಯು ವರದಿಯೇ ದೂರು ಆಗಿರುತ್ತದೆ ಎನ್ನುತ್ತಾರೆ. ಚಾಸಾ-01 ರವರು ವರದಿಯ ಜೊತೆ ಬೇರೆ ಯಾವುದೇ ದಾಖಲೆಗಳನ್ನು ಕೊಟ್ಟರಲಿಲ್ಲ. ಚಾಸಾ-1 ರವರು ನನಗೆ ಸುಳ್ಳು ವರದಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ಯಾವುದೇ ಘಟನೆ ಆಗದಿದ್ದರೂ ಮೇಲಾಧಿಕಾರಿಗಳ ಮಾತು ಕೇಳಿ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.
ಪಾಟೀ ಸವಾಲು ಉಳಿದ ಆರೋಪಿತರ ಪೈಕಿ ಅವರ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೋರಿದ್ದರಿಂದ, ಅದನ್ನೇ ಅಳವಡಿಸಿಕೊಳ್ಳಲಾಯಿತು.

ಮರು ವಿಚಾರಣೆ: ಇಲ್ಲ.

**( ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)**

**ಓ. ಹೇ. ಕೇ. ಸರಿ ಇದೆ.**

**ಜೆ. ಎಮ್. ಎಫ್. ಸಿ, ಭಾಲ್ಕಿ**